**2 ನೇ ಆಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ**

**ಸತ್ರ ಮೊಕದ್ದಮೆ ಸಂಖ್ಯೆ: 18/2022**

ಪಿ.ಡಬ್ಲುಃ **12** ಸಿಡಬ್ಲುಃ **18**

ಸಾಕ್ಷಿಯ ಹೆಸರು : ತಾರಾಕೇಶ್

ತಂದೆ ಹೆಸರು : ನರಸಿಂಹಲು

ವಯಸ್ಸು : **44** ವರ್ಷ

ವೃತ್ತಿ : ವ್ಯಾಪಾರ

ವಾಸಸ್ಥಳ : ಬಳ್ಳಾರಿ

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ **28-12-2022**

ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದಃ-

ಆರೋಪಿತರ ಪರಿಚಯ ಇರುವುದಿಲ್ಲ . ಘಟನೆಯ ಸಯಯದಲ್ಲಿ ಆರೋಪಿತರನ್ನು ನೋಡಿರುತ್ತೇನೆ . ಚಾಸಾ- **1, 8** ರಿಂದ **13** ರವರ ಪರಿಚಯ ಇರುತ್ತದೆ . ನನಗೆ ಚಾಸಾ-**1** ರವರ ಪರಿಚಯ , ಅವರ ತಮ್ಮ ಚಾಸಾ-**13** ರವರಿಂದ ಪರಿಚಯ .

ದಿಃ **08-10-2021** ರಂದು ರಾಃ **08-10** ಗಂಟೆಗೆ ಚಾಸಾ-**13** ರವರು ಗಂಗಪ್ಪ ಜಿನ್ ಸರ್ಕಲ್ ಹತ್ತಿರ ನಾನು ಇದ್ದಾಗ ಅವರು ಗಲಾಟೆಯಾಗಿರುತ್ತದೆ ಎಂದು ಮಿಲ್ಲರ್ ಪೇಟೆ ಹೋಗುತ್ತಿದ್ದನು . ನಾನು ಚಾಸಾ-**13** ರವರನ್ನು ವಿಚಾರಿಸಲಾಗಿ ಗಲಾಟೆಯಾಗುತ್ತಿದೆ ನಾನು ಮನೆಗೆ ಹೋಗುತ್ತಿದ್ದೇನೆ ಎಂದು ಅವನು ಹೇಳಿದನು . ನಂತರ **5** ನಿಮಿಷಕ್ಕೆ ನಾನು ಸಹ ಚಾಸಾ-**13** ರವರ ಮನೆಗೆ ಹೋದೆನು . ಜಂಡಾ ಕಟ್ಟೆ ಹತ್ತಿರ ಗಲಾಟೆಯಾಗುತ್ತಿತ್ತು ನಾನು ನೋಡಿರುತ್ತೇನೆ . ಮಕ್ ಬುಲ್ ಕಡೆಯವರು ಚಾಸಾ-**1** ರವರ ಜೊತೆ ಜಗಳ ಮಾಡುತ್ತಿದ್ದರು . ಸದರಿ ಗಲಾಟೆಯಲ್ಲಿ ವೆಂಕಟಸ್ವಾಮಿಯ ಮಕ್ಕಳಿಗೆ ಮತ್ತು ಆತನ ಹೆಂಡತಿಗೆ ಕೈಗೆ ಗಾಯ ಮಾಡಿ ಗಲಾಟೆ ಮಾಡುತ್ತಿದ್ದರು . ಜನ

ಎಲ್ಲಾ ಜಗಳ ಬಿಡಿಸಲು ಬಂದಿದ್ದಾರೆ ಅದಕ್ಕೆ ನೀನು ಉಳಿದುಕೊಂಡೆ ಎಂದು ಮಕ್ ಬುಲ್ ಕಡೆಯವರು ವೆಂಕಟಸ್ವಾಮಿಗೆ ಎಚ್ಚರಿಗೆ ಕೊಟ್ಟು ಹೊರಟು ಹೋದರು . ನಾನು ಚಾಸಾ-1 ರವರನ್ನು ಕೇಳಲಾಗಿ ಮರಳಿನ ವಿಷಯದಲ್ಲಿ ಗಲಾಟೆಯಾಗಿರುತ್ತದೆ ಎಂದು ಹೇಳಿದನು . ಈ ಬಗ್ಗೆ ದಿಃ **06-12-2021** ರಂದು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ. ಸಾಕ್ಷಿಯೂ ನ್ಯಾಯಾಲಯದ ಮುಂದೆ ಹಾಜರಿರುವ **1, 2** ಮತ್ತು **5** ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀಸವಾಲು ಆರೋಪಿತರ ಪರವಾಗಿ ಶ್ರೀ ಬಿ ವಿ ಬಿ ವಕೀಲರಿಂದಃ</u>

ನನ್ನ ಮನೆಯೂ ಬಳ್ಳಾರಿಯ ಗಣೇಶ್ ಗುಡಿಯ ಹತ್ತಿರ ಬೊಮ್ಮನಹಾಳ್ ರಸ್ತೆಯಲ್ಲಿ ಇರುತ್ತದೆ ಎಂದರೆ ಸರಿ. ನಾನು ಮತ್ತು ಚಾಸಾ-**1** ರವರು ಕುಲಸ್ಥರು ಎಂದರೆ ಸರಿ. ಚಾಸಾ-**1** ನನಗೆ ಬಂಧುಗಳು ಆಗಬೇಕೆಂದರೆ ಸರಿಯಲ್ಲ. ಚಾಸಾ-**12** ರವರು ನನಗೆ ಗೊತ್ತಿಲ್ಲ. ನಾನು ಚಾಸಾ-**1** ರವರ ಮನೆಗೆ ಹೋಗುವುದಿಲ್ಲ. ಅವರ ಕುಟುಂಬದ ಬಗ್ಗೆ ನನಗೆ ವೈಯಕ್ತಿಕ ಗೊತ್ತಿರುವುದಿಲ್ಲ ಎಂದರೆ ಸರಿ. ಅವರ ಮನೆಯಲ್ಲಿ ಯಾರು ಯಾರು ವಾಸವಾಗಿರುತ್ತಾರೆ ಎಂದು ನನಗೆ ವೈಯಕ್ತಿಕವಾಗಿ ಗೊತ್ತಿಲ್ಲ ಎಂದರೆ ಸರಿ . **1** ನೇ ಆರೋಪಿಯೂ ನನಗೆ ವೈಯಕ್ತಿಕವಾಗಿ ಗೊತ್ತಿಲ್ಲ ಎಂದರೆ ಸರಿ. ಉಳಿದ ಆರೋಪಿತರು ಸಹ ನನಗೆ ವೈಯಕ್ತಿಕವಾಗಿ ಗೊತ್ತಿಲ್ಲ ಎಂದರೆ ಸರಿ.

ಚಾಸಾ-**13** ಮತ್ತು ನಾನು ಸ್ನೇಹಿತರು ಎಂದರೆ ಪರಿಚಯಸ್ಥರು. ವೈಯಕ್ತಿಕವಾಗಿ ನನಗೆ ಮತ್ತು ಚಾಸಾ-**13** ರವರಿಗೆ ಯಾವುದೇ ವ್ಯವಹಾರ ಇಲ್ಲ ಎಂದರೆ ಸರಿ. ಗಂಗಪ್ಪನ ಜಿನ್ ಹತ್ತಿರ ಆ ದಿನ ನನ್ನದು ಯಾವುದೇ ಕೆಲಸ ಇಲ್ಲ ಎಂದರೆ ಸರಿ . ಚಾಸಾ-**13** ರವರದು ಸಹ ನನ್ನ ಹತ್ತಿರ ಯಾವುದೇ ಕೆಲಸ ಇಲ್ಲ ಎಂದರೆ ಸರಿ . ರಾಃ **8-10** ಗಂಟೆಗೆ ಕತ್ತಲು ಆಗಿತ್ತು ಎಂದರೆ ಸರಿ . ಗಂಗಪ್ಪ ಜಿನ್ ಹತ್ತಿರ ಸಾಕಷ್ಟು ವಾಹನಗಳು ಓಡಾಡುತ್ತಿರುತ್ತವೆ ಎಂದರೆ ಸರಿ. ಆ ಸಮಯದಲ್ಲಿ ಕತ್ತಲಲ್ಲಿ ಯಾರು ಯಾರು ಬರುತ್ತಾರೆ

ಎಂಬುದು ಗೊತ್ತಾಗುವುದಿಲ್ಲ ಎಂದರೆ ಸರಿ . ಗಂಗಪ್ಪ ಜಿನ್ ಹತ್ತಿರ ಸಹ ಬಹಳ ಜನ ಸರ್ಕಲ್ ನಲ್ಲಿ ಇರುತ್ತಾರೆ ಎಂದರೆ ಸರಿ . ಚಾಸಾ-13 ರವರು ರಾಘವೇಂದ್ರ ಟ್ಯಾಕೀಸ್ ಕಡೆಯಿಂದ ಬಂದನು . ರಾಘವೇಂದ್ರ ಟಾಕೀಸ್ ನಿಂದ ಮಿಲ್ಲರ್ ಪೇಟೆಗೆ ಚಾಸಾ-13 ರವರ ಮನೆಗೆ ಹೋಗಬೇಕೆಂದರೆ ಗಂಗಪ್ಪ ಜಿನ್ ಗೆ ಬರುವ ಮೊದಲು 2-3 ರಸ್ತೆಗಳು ಇರುತ್ತವೆ ಎಂದರೆ ಸರಿ . ಸದರಿ ಮನೆಗೆ ಹೋಗಬೇಕಂದರೆ ಚಾಸಾ-13 ರವರು ಗಂಗಪ್ಪ ಜಿನ್ ಗೆ ಬರುವ ಅವಶ್ಯಕತೆ ಇಲ್ಲ ಎಂದರೆ ಸರಿಯಲ್ಲ . ಸದರಿ ಗಂಗಪ್ಪ ಜಿನ್ ರಸ್ತೆಗೆ ಬರುವ ಅವಶ್ಯಕತೆ ಚಾಸಾ-13 ರವರಿಗೆ ಇರಲಿಲ್ಲ ಎಂದರೆ ಸರಿಯಲ್ಲ .

ಜಂಡಾ ಕಟ್ಟೆ ಹತ್ತಿರ ಗಲಾಟೆಯಾಗಿದೆ ಎಂದು ಹೇಳುವ ಸಮಯದಲ್ಲಿ 15 ರಿಂದ 20 ಜನ ಸೇರಿದ್ದರು . ಸದರಿ ಸಮಯದಲ್ಲಿ ಯಾರು ಯಾರು ಸೇರಿದ್ದರು ಎಂದು ನನಗೆ ಗೊತ್ತಿಲ್ಲ . ಪೊಲೀಸರು ನನ್ನ ಕರೆಯಿಸಿ ಯಾರು ಯಾರು ಆ ಜಗಳದಲ್ಲಿ ಇದ್ದರು ಎಂದು ಗುರುತು ಪತ್ತೆ ಮಾಡುವ ಕವಾಯಿತು ನಡೆಸಿರುವುದಿಲ್ಲ . ನಾನು ಮೊದಲ ಬಾರಿಗೆ ನ್ಯಾಯಾಲಯದಲ್ಲಿ 1 , 2 ಮತ್ತು 5 ನೇಆರೋಪಿತರನ್ನು ನೋಡುತ್ತಿದ್ದೇನೆ ಎಂದರೆ ಸರಿಯಲ್ಲ . ಈ ದಿನ ನನ್ನ ಜೊತೆ ನ್ಯಾಯಾಲಯಕ್ಕೆ ಚಾಸಾ-13 ರವರು ಬಂದಿರುತ್ತಾರೆ ಎಂದರೆ ಸರಿ . ಚಾಸಾ-13 ರವರು ನಾನು ಮೇಲೆ ಹೇಳಿದ 3 ಜನ ಆರೋಪಿತರನ್ನು ನನಗೆ ತೋರಿಸಿದನು ಎಂದರೆ ಸರಿ . ಆ ಕಾರಣಕ್ಕೆ ನಾನು ಆ 3 ಜನ ಆರೋಪಿತರನ್ನು ಗುರುತಿಸುತ್ತಿದ್ದೇನೆ ಎಂದರೆ ಸರಿ .

ನಾನು ಮೇಲೆ ಹೇಳಿದ ಘಟನೆಯಾದ ದಿನ ಎಂದು ಹೇಳುವ ದಿನದಂದು ಚಾಸಾ-13 ರವರು ನನಗೆ ಬೆಟ್ಟಿಯಾಗಿದ್ದ , ನಾನು ಜಂಡಾ ಕಟ್ಟೆ ಹತ್ತಿರ ಹೋಗಿಲ್ಲ , ಯಾವುದೇ ಗಲಾಟೆ ನೋಡಿಲ್ಲ ಎಂದರೆ ಸರಿಯಲ್ಲ . ಚಾಸಾ-1 ರವರ ಹೆಂಡತಿ ಮತ್ತು

ಮಗನಿಗೆ ಗಾಯಗಳಾಗಿದ್ದವು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಚಾಸಾ-13 ರವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

ಮರುವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ.